ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ನೋಡಿದ್ದೇನೆ. ಆ ಮನೆಗಳು ಹಿಂದೆ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನವರು ಕಟ್ಟಿರತಕ್ಕವು. ಈಗ ಅವುಗಳ ದುರಸ್ತಿ ಕೆಲಸವನ್ನು ಹೇಗೆ ಮಾಡಬೇಕೆಂಬುದು ಬೇರೆ ಪ್ರಶ್ನೆ, ಇಲ್ಲಿರತಕ್ಕದ್ದು ತೊಣಚಿಕೊಪ್ಪಲಿಗೆ ಮಾತ್ರ ಸಂಬಂಧಪಟ್ಟದ್ದು. ನೀರು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ನಾವು ಕಟ್ಟತಕ್ಕ ಮನೆ ಪೂರ್ಣಿಸಿ ಕೊಡುವುದಕ್ಕೆ ಮುಂಜಿ ಬೇಗ ಎಲ್ಲ ಕಾರ್ಯಕ್ರಮವನ್ನು ಮುಗಿಸಿ ಕೊಡುತ್ತೇವೆಂಬ ಭರವಸೆ ಕೊಡುತ್ತೇನೆ. ಟ್ರಸ್ಟ್ ಬೋರ್ಡಿನವರು ಕಟ್ಟಿರತಕ್ಕ ಮನೆಗಳ ವಿಚಾರದಲ್ಲಿ ಬೇರೆ ಪ್ರಶ್ನೆ ಹಾಕಿದರೆ ವಿಚಾರ ಮಾಡುತ್ತೇನೆ.

ವಿಷಯ :— ಗದಗಿನಲ್ಲಿ ರಿಮ್ಯಾಂಡ್ ಹೋಂ ಬಂಡಾದ ಬಗ್ಗೆ ಹಾಗೂ ಕಟ್ಟಡದ ಬಾಡಿಗೆಯ ವಿಚಾರದಲ್ಲಿ—

ಪ್ರ. 159 (88) ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ) ಮುನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:—

ಅ, ಧಾರವಾಡ ಜಿಲ್ಲಾ ಗದಗದಲ್ಲಿದ್ದ ರಿಮಾಂಡ್ ಹೋಮನ್ನು ಬಂದು ಮಾಡಿ ಸದರಿ ಕಟ್ಟಡವನ್ನು ಬೇರೊಂದು ಸಂಸ್ಥೆಗೆ ಬಾಡಿಗೆ ಕೊಟ್ಟದ್ದು ನಿಜವೆ :

ಆ. ಹಾಗಿದ್ದಲ್ಲಿ ಸದರಿ ಕಟ್ಟಡವನ್ನು ಬಾಡಿಗೆಗೆ ಎಂದು ಯಾರಿಗೆ ಮತ್ತು ಎಷ್ಟು ಬಾಡಿಗೆಗೆ ಕೊಡಲಾಯಿತು :

ಇ. ಬಾಡಿಗೆಯನ್ನು ಗೊತ್ತುಪಡಿಸಿದಾಗ ಅನುಸರಿಸಿದ ಕ್ರಮಗಳೇನು :

ಈ. ಗದಗ ರಿಮಾಂಡ್ ಹೋಂ ಬಂದಾಗಿರುವುದರಿಂದ ದಾರಿ ತಪ್ಪಿದ ಮಕ್ಕಳಿಗೆ ಹಾಗೂ ಪಾಲಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸರಕಾರಕ್ಕೆ ದೂರುಗಳು ಬಂದಿವೆಯೆ ;

ಉ. ಹಾಗಿದ್ದಲ್ಲಿ ಸರಕಾರದವರು ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಹಾಗೂ ರೇಷ್ಮೆ) :—

ಅ. ಹೌದು.

ಆ. ಸದರಿ ಕಟ್ಟಡವನ್ನು ತಾತ್ಕಾಲಿಕವಾಗಿ ಬಾಡಿಗೆ ಮೇರೆಗೆ ತಿಂಗಳಿಗೆ 300-00 ರೂ. ಗಳಂತೆ ಹುಳಿಕೋಟಿ ಎಜುಕೇಷನ್ ಸೊಸೈಟಿ, ಗದಗ—ಬೆಟಗೇರಿ ಇವರಿಗೆ 15-10-81 ರಿಂದ ಕೊಡಲಾಗಿದೆ.

ಇ. ಬಾಲಕೀಯರ ಪ್ರೌಢ ಶಾಲೆಯನ್ನು ನಡೆಸಲು ಕೇವಲ 6 ತಿಂಗಳಿಗೋಸ್ಕರ ವಾದುದರಿಂದ ಸರ್ಕಾರವು ತಿಂಗಳಿಗೆ 300-00 ರೂ, ಗಳಂತೆ ಬಾಡಿಗೆಯನ್ನು ತಾತ್ಪೂರಿಕವಾಗಿ ನಿರ್ಧರಿಸಿ ಸಂಸ್ಥೆಗೆ ಕೊಡಲಾಯಿತು.

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಹುಲಕೋಟಿ ಶಿಕ್ಷಣ ಸಂಸ್ಥೆಗೆ ಕೊಡಬೇಕು ಎನ್ನುವ ಉದ್ದೇಶದಿಂದಲೇ ಈ ರಿಮ್ಯಾಂಡ್ ಹೋಮನ್ನು ತೆಗೆದುಹಾಕಲಾಯಿತೇ ಹೇಗೆ ?

ಅಧ್ಯಕ್ಷರು.—ರಿಮ್ಯಾಂಡ್ ಹೋಂ ಶಾಶ್ವತವಾಗಿ ಇರಬೇಕೆಂದು ನಿಮ್ಮ ಅಭಿಪ್ರಾಯವೆ ?

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅದು ಬೇರೆ ಕಡೆಗೆ ಹೋಗಿದೆ. ಹುಲಕೋಟಿ ಶಿಕ್ಷಣ ಸಂಸ್ಥೆಗೆ ಕೊಡುವುದಕ್ಕಾಗಿಯೇ ಅದನ್ನು ತೆರವು ಮಾಡಿದ್ದಾರೋ ಹೇಗೆ ?

ಶ್ರೀಮತಿ ಚಂದ್ರಪ್ರಭ ಅರಸು.—ಧಾರವಾಡ ಜಿಲ್ಲೆಯಲ್ಲಿ ತಲಾ ಒಂದರಂತೆ ಧಾರವಾಡ, ರಾಣಿ ಬೆನ್ನೂರು, ಹುಬ್ಬಳ್ಳಿ ಮತ್ತು ಗದಗಿನಲ್ಲಿ 4 ರಿಮ್ಯಾಂಡ್ ಹೋಂಗಳಿವೆ. ಸರಕಾರಿ ಜಿಲ್ಲಾ ಪರಿವೀಕ್ಷಣಾಲಯ ಮತ್ತು ಅನುಪಾಲನಾ ಸಂಸ್ಥೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡನಂತರ ಒಂದು ಜಿಲ್ಲೆಯಲ್ಲಿ ನಾಲ್ಕು ಪರಿವೀಕ್ಷಣಾ ಗೃಹಗಳ ಅಗತ್ಯ ಇಲ್ಲವೆಂದು ಅರಿತನಂತರ ಧಾರವಾಡ, ರಾಣಿ ಬೆನ್ನೂರು ಪರಿವೀಕ್ಷಣಾ ಗೃಹಗಳನ್ನು ಮುಂದುವರೆಸಲಾಯಿತು. ಉಳಿದ ಜಿಲ್ಲೆಗಳಲ್ಲಿ ತಲಾ ಒಂದರಂತೆ ಪರಿವೀಕ್ಷಣಾ ಗೃಹಗಳಿವೆ, ಗದಗಿನಲ್ಲಿ ಪರಿವೀಕ್ಷಣಾ ಗೃಹದ ಕಟ್ಟಡದ ಖೊಲಿ ಇದ್ದುದರಿಂದ ಮತ್ತು ಕುಲಕೋಟ ವಿದ್ಯಾಸಂಸ್ಥೆಯಿಂದ ಮನವಿ ಬಂದಿದ್ದರಿಂದ ಮೊದಲ 6 ತಿಂಗಳಿಗೋಸ್ಕರವಾಗಿ ಹೆಣ್ಣು ಮಕ್ಕಳ ಪ್ರೌಢಶಾಲೆ ತೆರೆಯಲು ತಿಂಗಳಿಗೆ 300 ರೂಪಾಯಿಗಳ ಬಾಡಿಗೆಯಂತೆ ಕೊಟ್ಟಿರುವುದು ನಿಜ, ಸಾಕಷ್ಟು ಮಕ್ಕಳ ಸಂಖ್ಯೆ ಇಲ್ಲದೇ ಇದ್ದುದರಿಂದ ಆ ಸಂಸ್ಥೆಯವರಿಗೆ ಕಟ್ಟಡವನ್ನು ಕೊಟ್ಟಿದೆ. ಯಾರಿಗೇ ಅನಾನುಕೂಲವಾಗಿದೆ ಎಂದು ತಂದೆತಾಯಿಗಳಿಂದಾಗಲೀ ಅಥವಾ ಇತರ ಸಂಬಂಧಪಟ್ಟವರಿಂದಾಗಲೀ ದೂರುಗಳು ಬಂದಿಲ್ಲ. ಮುಂದೆ ಅಲ್ಲಿ ನಮ್ಮದೇ ಪರಿವೀಕ್ಷಣಾಲಯ ಅಥವಾ ಕೈಗಾರಿಕಾ ಘಟಕವನ್ನು ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ—ಇವರು ಹುಲಕೋಟಿ ವಿದ್ಯಾಸಂಸ್ಥೆಗೆ ಕಟ್ಟಡ